ದಿವ್ಯ, ಬಾವಿಕೆರೆ
ಮಾನವನಿಗೆ ಬಾಲ ಇದ್ದರೆ ಹೇಗಿರುತ್ತದೆ?



ಈಗಲೇ ಬಾಲವಿರುವವರಿದ್ದಾರಲ್ಲಾ... ಬಾಲಚಂದ್ರ, ಬಾಲಸುಬ್ರಹ್ಮಣ್ಯ, ಬಾಲಕೃಷ್ಣ, ಬಾಲಾಂಬ, ಬಾಲನಾಗಮ್ಮ...

ಆರ್. ಮಧುಸೂದನ್, ಹಾಸನ
ತಾಳಿ ಕಟ್ಟುವಾಗ ಮೂರರ ಬದಲು ನಾಲ್ಕು ಗಂಟು ಕಟ್ಟಿಸಿದರೆ ಡೈವೋರ್ಸ್ ಆಗುವುದನ್ನು ತಡೆಯಬಹುದಾ?
ಸತಿಯ ಹುಬ್ಬು ಗಂಟಿಕ್ಕದಂತೆ ನೋಡಿಕೊಂಡರೆ ಗಂಟೇ ಹಾಕದಿದ್ದರೂ ಓಕೆ.

ದೀಪಕ್ ಘಾಟಿ, ಬೆಂಗಳೂರು
ತಾವು ಮಾತೆತ್ತಿದರೆ Punಚ್! ಕೆಲವರು ಪಂಚೆ ಎತ್ತಿದರೆ ಮಾತಾಗುವುದಲ್ಲಾ?
ಓಹ್! ಅವರೇ? ಜವಳಿ ವ್ಯಾಪಾರಿ. ದಿನಕ್ಕೊಂದು ಪಂಚೆಕಟ್ಟನ್ನು ಮಾರಿದರೆ ಅವರಿಗೆ ಮಾ(ಲಕ್ಷ್ಮಿ) ತಾಗುತ್ತಾಳೆ.

ವಿ. ಹಮೀದ್, ವಿಟ್ಲ
ಲವ್ವನ್ನು ಫೆವಿಕಾಲ್‌ನಿಂದ ಅಂಟಿಸಿಕೊಂಡ್ರೆ...?




ಆಗದು. ಫೆವಿಕಾಲ್ ಮರವನ್ನು ಅಂಟಿಸುತ್ತದೆ. ಲವ್ ಮರವಲ್ಲ, ಅಮರ.

ಮುರಲೀಧರ ಕುಲಕರ್ಣಿ, ಬೀದರ
ಭಾರತೀಯರ ವಿದೇಶಿ ಮೋಹವನ್ನು ಕೊರೊನಾ ಕಡಿಮೆಗೊಳಿಸಿದೆ ಎಂದು ಭಾವಿಸಬಹುದೆ?
ಹ್ಞ! ಇದು ಕೆಲವು ಕಾಲದ ನಂತರ ಮತ್ತೆ ಬೇಕೆನಿಸುವ ಹೆರಿಗೆ ವೈರಾಗ್ಯವಷ್ಟೆ.

ವಿ. ಹೇಮಂತಕುಮಾರ್, ಬೆಂಗಳೂರು
ನಾಚಿಕೊಂಡಾಗ ಹೆಣ್ಣಿನ ಕೆನ್ನೆ ಕೆಂಪಾಗುವುದು ಏಕೆ ಸರ್?
ಕಾವೇರಿದಾಗ ಕೆಂಪಾಗುವುದು ಸ್ವಾದಿಷ್ಟ ವಸ್ತುಗಳ ಗುಣ.

ದವಡಿ ಈರಣ್ಣ, ಲಕ್ಷ್ಮೇಶ್ವರ
ಗಂಗಾವತಿ ಪ್ರಾಣೇಶ ಹಾಸ್ಯ ಮಾಡುವುದನ್ನು ಕಂಡು ಬ್ಯೂಟಿಷಿಯನ್‌ಗಳು ಪಾರ್ಲರ್ ಹೆಸರು ಬದಲಿಸುತ್ತಿದ್ದಾರಲ್ಲಾ...?
ಗುಡ್. ಹಾಸ್ಯದ ಉದ್ದೇಶವೇ ವಿನೋದದ ಮೂಲಕ ಸಮಾಜದ ರಿಪೇರಿ.

ರಮಾನಂದ ಶರ್ಮ, ಬೆಂಗಳೂರು
ಮಾಂಗಲ್ಯಧಾರಣೆ ಆಗುತ್ತಿದ್ದಂತೆಯೇ ವಾಲಗದವರು 'ಹೊಡಿಮಗ ಒಡಿಮಗ' ಹಾಡನ್ನು ನುಡಿಸಿದರಲ್ಲಾ...?
'ರೊಟ್ಟಿ ಒಡಿ', 'ಊಟ ಪಟ್ಟಾಗಿ ಹೊಡಿ' ಎಂದು ಕಿಚನ್, ಡೈನಿಂಗ್ ಹಾಲ್‌ಗಳಿಗೆ ನುಡಿಸಿದ್ದಂತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಮನೆಯಲ್ಲಿ ಯಮನ ಫೋಟೊ ಇರಿಸಿ ನಮಗೆ ಸಾವು ಬರದಿರಲೆಂದು ಪೂಜೆ ಮಾಡುವುದಿಲ್ಲವೇಕೆ?
ಬಡವನಾಗಿಸೆಂದು ಲಕ್ಷ್ಮಿಯನ್ನೂ ಬೇಡೆವು! ಖಾತೆಗೆ ವಿರುದ್ಧವಾದ ಕೆಲಸ ಮಾಡೆಂದು ಬೇಡುವುದು ರೂಢಿಯಲ್ಲಿಲ್ಲ.

ಬಿ.ಸಂ. ಸುಬ್ಬಣ್ಣ, ಬೆಂಗಳೂರು
ಸ್ವರ್ಗಕ್ಕೆ ನೀನು ಹೋಗುವೆಯ ಗೋರ ಎಂದು ಭಕ್ತ ಕುಂಬಾರನಿಗಿತ್ತ ಪ್ರಶ್ನೆಯನ್ನು ಇಂದಿನ ರಾಜಕಾರಣಿಗೆ ಕೇಳಿದರೆ?
'ಅಲ್ಲಿಂದಲೇ ಬರುತ್ತಿದ್ದೇನೆ – ಸ್ವರ್ಗ ಬಾರ್ & ರೆಸ್ಟೋರೆಂಟ್' ಎನ್ನುತ್ತಾನೆ.

ಶಿವಮೊಗ್ಗ ರಮೇಶ್, ಮೈಸೂರು
ಕೊರೊನ ದಾಳಿಯಾದಾಗಿನಿಂದ ವಾರಪತ್ರಿಕೆ, ದಿನಪತ್ರಿಕೆಗಳು ಶಿಲ್ಪಾ ಶೆಟ್ಟಿಯಂತೆ ಸ್ಲಿಂ ಆಗಿರಲು ಕಾರಣ?
ಜಾಹೀರಾತುದಾರರು 'ಕಷ್ಟಾಂಗಾಸನ'ದಲ್ಲಿ ಕುಳಿತುಬಿಟ್ಟಿದ್ದರಿಂದ ಹೆಚ್ಚಿನ ಪುಟಗಳು ಶವಾಸನ ಹಾಕಿದವಂತೆ.

ಸುಂದರ್, ಬೆಂಗಳೂರು
ಆತ ನಾಲ್ಕು ಜನಕ್ಕೆ ಬೇಕಾದವನು; ಇದಕ್ಕೆ ಬರಲಿ ತಮ್ಮ ವ್ಯಂಗ್ಯೋಕ್ತಿ?
ಸಹಕಾರಿ ಬ್ಯಾಂಕ್ ಅಧ್ಯಕ್ಷನಂತೆ ಪೊಲೀಸರು, ಕೋರ್ಟು, ಪಾಲುದಾರರು, ಖಾತೆದಾರರಿಗೆ ಬೇಕಾಗಿದ್ದಾನೆ.

## ಬಹುಮಾನಿತ ಪ್ರಶ್ನೆ

ಎಂ.ಎ. ಕುಮಾರ್, ಬೆಂಗಳೂರು
ಬದುಕಿರುವ ವ್ಯಕ್ತಿಯ ಭಾವಚಿತ್ರಕ್ಕೆ ಹೂವಿನ ಹಾರ ಹಾಕುವುದಿಲ್ಲ. ಏಕೆ?
ಇಂಥದ್ದೇ, ಇಷ್ಟುದ್ದದ್ದೇ, ಇಷ್ಟು ದಪ್ಪದ್ದೇ ಹಾಕಬೇಕೆಂದು ಡಿಮ್ಯಾಂಡ್ ಮಾಡಿಯಾರೆಂಬ ಭಯ.

ಬಿದರಹಳ್ಳಿ ಚನ್ನವೀರಪ್ಪ, ಹೂವಿನಹಡಗಲಿ
ತನ್ನ ಊರಲ್ಲಿ ರಂಗ, ಪರ ಊರಲ್ಲಿ ಮಂಗ ಎಂದರೇನು?
ಪರ ಊರಲ್ಲಿ ವಿವಿಧ ಬ್ರ್ಯಾಂಚ್‌ಗಳಲ್ಲಿ ದುಡಿಯುವನೆಂದು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಅನುಭವ ಎಂಬ ಗುರುವಿಗೆ ನಾವು ಸಲ್ಲಿಸಬೇಕಾದ ದಕ್ಷಿಣೆ ಯಾವುದು?
ಗಮನ, ಸಮಯ.

ನಾಜ್ಯೋತಿ, ಹೂವಿನಹಡಗಲಿ
ನೀರಿನಿಂದ ಚಲಿಸುವ ವಾಹನಗಳೇನಾದರೂ ರಸ್ತೆಗಿಳಿದರೆ?



ನೀರಿಗೆ ಬೀರಿನ ಬೆಲೆ ಬರುತ್ತದೆ.

ಬಿ.ಆರ್.ಉಷಾ, ಬೆಂಗಳೂರು
ತೆಂಗಿನಮರ ಉದ್ದ; ಮಾವಿನಮರ ಅಗಲ; ನೀವು?
ಉತ್ತರದಲ್ಲಿ ಗಿಡ್ಡ; ಅರ್ಥದಲ್ಲಿ ಅಗಲ. ಹಾಸ್ಯದಲ್ಲಿ ಆಳ.

ಆರತಿ ಘಟಿಕಾರ್, ದುಬೈ
ಕೊರೊನಾದಿಂದ ಕಾಪಾಡಿಕೊಳ್ಳಲು ಹೊರಗೆ ಅಂತರ. ಮನೆಯೊಳಗೆ?
ಬಿಸಿನೀರು, ಕಷಾಯಗಳ ಅವಾಂತರ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಬಿಗ್‌ಬಾಸ್‌ಗೆ ಹೋಗಬೇಕೆಂದಿರುವೆ. ಏನೇನು ಅರ್ಹತೆಗಳಿರಬೇಕು?
ಅಕ್ವೇರಿಯಂನ ಮೀನಿನಂತೆ ಮೂರು ತಿಂಗಳು ಜೀವಿಸಲು ಸಿದ್ಧವಿದ್ದರೆ ಸಾಕು.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in